ಗಾತ್ರ ಪ್ರಾಮುಖ್ಯತೆ ಪಡೆಯುವುದಾದರೆ ಅದು ಹಡಗುಗಳ ವಿಚಾರಕ್ಕೇ ಸರಿ. ದೊಡ್ಡ ವ್ಯವಹಾರವೊಂದು ಮುಳುಗಿದರೆ 'ಹಡಗು ಮುಳುಗಿದಂತೆ' ಎಂದು ವರ್ಣಿಸುವುದುಂಟು. ಹಡಗುಗಳು ಎಂದರೆ, ಅವು ಗಾತ್ರದಲ್ಲಿ ಅತ್ಯಂತ ದೊಡ್ಡವು ಎಂದೇ ನಮ್ಮ ತಿಳಿವಳಿಕೆ ಹೇಳುತ್ತದೆ. ಅಂದಹಾಗೆ, ಹಡಗುಗಳಲ್ಲೇ ಅತಿದೊಡ್ಡ ಹಡಗು ಎಂದರೆ ಅದೆಷ್ಟು ದೊಡ್ಡದಿರಬಹುದು?

'ಟೈಟಾನಿಕ್' ಎಂಬ ಪ್ರಯಾಣಿಕರ ಅತಿ ದೊಡ್ಡ ವಿಲಾಸಿ ಹಡಗಿನ ಹೆಸರು ಬಹುತೇಕರಿಗೆ ಗೊತ್ತು. 1912ರ ಕಾಲದಲ್ಲಿ ಅದು ಅತ್ಯಂತ ಶ್ರೀಮಂತ ಹಡಗಾಗಿತ್ತು. ದುರದೃಷ್ಟವಶಾತ್, ಟೈಟಾನಿಕ್ ಮುಳುಗಿದಾಗ 'ಹಡಗು ಮುಳುಗುವುದು' ಎಂದರೇನೆಂಬ ಅನುಭೂತಿ ಎಲ್ಲರಲ್ಲೂ ಅನುರುಣಿಸಿತು. ಪ್ರಪಂಚದ ದೊಡ್ಡ ಬಂಡವಾಳ ಸಮುದ್ರದ ತಳ ಸೇರಿತು. ಅದರೊಂದಿಗೆ ಅಪಾರ ಪ್ರಾಣಗಳು, ಮನುಷ್ಯನ ಪ್ರತಿಷ್ಠೆಗಳು ನೀರುಪಾಲಾದವು. ಈ ಬಗ್ಗೆ ಹಲವು ಭಾಷೆಗಳಲ್ಲಿ 18 ಸಿನಿಮಾಗಳು, 18 ಸಾಕ್ಷ್ಯಚಿತ್ರಗಳು, ಟಿ.ವಿ. ವರದಿ ಇತ್ಯಾದಿ ಕಾರ್ಯಕ್ರಮಗಳು ಟೈಟಾನಿಕ್ ದುರಂತದ ಗಾಢ ಅನುಭವವನ್ನು ಪ್ರಪಂಚದ ಎಲ್ಲೆಡೆಯೂ ಹಂಚಿದವು.

ಹಾಗೆಂದು ಮನುಷ್ಯ ಹಿಮ್ಮೆಟ್ಟಿದನೇ? ಅಂತಹ ಅತಿ ದೊಡ್ಡ ಮತ್ತು ಐಷಾರಾಮಿ ಪ್ರಯಾಣಿಕರ ಹಡಗುಗಳನ್ನು ಕಟ್ಟುವುದನ್ನು ಕೈ ಬಿಟ್ಟನೇ ಎಂಬ ಪ್ರಶ್ನೆಗೆ ಉತ್ತರವೆಂದರೆ ಖಂಡಿತಾ ಇಲ್ಲ. ಟೈಟಾನಿಕ್‌ಗಿಂತಲೂ ದೊಡ್ಡ ಪ್ರಯಾಣಿಕರ ಹಡಗುಗಳನ್ನು ಮತ್ತೆ ಮತ್ತೆ ಕಟ್ಟಲಾಗಿದೆ. ಅವುಗಳನ್ನು ಪ್ರಯಾಣಿಕರ ವಿಲಾಸಿ ಪ್ರವಾಸಗಳಿಗೆ ಉಪಯೋಗಿಸುತ್ತಲೇ ಇದ್ದಾರೆ.

21ನೇ ಶತಮಾನದ ವಿಸ್ಮಯವೆನಿಸಿರುವ, ಇಂದಿನ ಅತಿ ದೊಡ್ಡ ಪ್ರಯಾಣಿಕರ ಹಡಗಿನ ಹೆಸರು 'ಸಿಂಫೊನಿ ಆಫ್ ದಿ ಸೀಸ್' (symphony of the seas). ಇದು ಪ್ರಯಾಣಿಕರ ಸುಖ ಪ್ರವಾಸಕ್ಕಾಗಿ ಕಟ್ಟಿದ ಅತ್ಯಂತ ದೊಡ್ಡ ಮತ್ತು ಶ್ರೀಮಂತ ಹಡಗು. ಇದು 2018ರಿಂದ ಬಳಕೆಯಲ್ಲಿದೆ. ಈ ಬಗೆಯ ಶ್ರೀಮಂತ ಹಡಗುಗಳಿಗೆ ಪ್ರಸಿದ್ಧವಾದ 'ರಾಯಲ್ ಕ್ಯಾರೆಬಿಯನ್ ಕ್ರೂಸ್' ಕಂಪನಿಯವರು ಇದರ ಒಡೆಯರು.

ಇದನ್ನು ನಿರ್ಮಿಸಲು 2016ರಲ್ಲಿ ತಗುಲಿದ ವೆಚ್ಚ 1.35 ಬಿಲಿಯನ್ ಡಾಲರ್. ಇದನ್ನು ನೀರಲ್ಲಿ ತೇಲಿಸಿದ ನಂತರವೂ ಅದರ ಒಳಗಿನ ವಿನ್ಯಾಸಕ್ಕೆ ಒಂದು ವರ್ಷ ತಗುಲಿ, 2018ರ ಮಾರ್ಚ್‌ನಲ್ಲಿ ಮೊದಲ ಬಾರಿಗೆ ಪ್ರಯಾಣಿಕರ ಪ್ರವಾಸಕ್ಕೆ ಬಳಸಲಾಯಿತು.

## ಸುಖ ಸೂರೆಗೊಳ್ಳುವ ಹಂಬಲದಲ್ಲಿ...

ಈ ಹಡಗಿನಲ್ಲಿ ಪ್ರವಾಸಕ್ಕೆ ಬರುವ ಜನರು ಪ್ರಪಂಚದ ಅತ್ಯಂತ ಶ್ರೀಮಂತ ಹಡಗನ್ನು ನೋಡಲು ಮತ್ತು ಅಲ್ಲಿನ ಐಷಾರಾಮಿ ಸವಲತ್ತುಗಳನ್ನು ಅನುಭವಿಸಲೆಂದೇ ಬರುತ್ತಾರೆ. 'ಸಿಂಫೊನಿ ಆಫ್ ದಿ ಸೀಸ್' ಪೂರ್ವ ಮತ್ತು ಪಶ್ಚಿಮ ದಿಕ್ಕುಗಳ ಎರಡು ಪ್ರವಾಸಗಳನ್ನು ಹಮ್ಮಿಕೊಳ್ಳುತ್ತದೆ. ಉದಾಹರಣೆಗೆ, ಪ್ರತಿವಾರಕ್ಕೊಮ್ಮೆ ಅಮೆರಿಕಾದ ಮಯಾಮಿ ಬಂದರಿನಿಂದ ಹೊರಟು ಗಲ್ಫ್ ಆಫ್ ಮೆಕ್ಸಿಕನ್ ಸಮುದ್ರದಲ್ಲಿ ಒಂದು ವಾರದ 140 ಮೈಲುಗಳ ವೈಭವೋಪೇತ ಪ್ರವಾಸ ಮಾಡಿ ಹಿಂತಿರುಗುತ್ತದೆ. ಜೊತೆಗೆ ಬಹಾಮದ ದ್ವೀಪಗಳ ಸೌಂದರ್ಯವನ್ನು ಸವಿಯುವ ಅವಕಾಶವನ್ನು ನೀಡುತ್ತದೆ. ಬೃಹತ್ ಗಾತ್ರವಿದೆಯೆಂದು ಈ ಹಡಗು



ಒಂದು ಪುಟ್ಟ ಊರಿನಂತೆ ಕಾಣಿಸುವ ಸಿಂಫೊನಿ ಹಡಗು

ಸಮುದ್ರದ ಮೇಲೆ ತೇಲುವ ಸ್ವರ್ಗ